ಮುಖಪುಟ
ಲೇಖನ

YouTube

# ಹಣದ ಆಸೆಯಷ್ಟೇ ಅಲ್ಲ, ಕೆಲಸದ ಮೇಲೆ ಪ್ರೀತಿಯೂ ಇರಬೇಕು



ಕನ್ನಡದಲ್ಲಿ ಸಾಹಿತ್ಯ, ಸಿನಿಮಾ, ಇತಿಹಾಸ – ಹೀಗೆ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ವಿಡಿಯೊಗಳನ್ನು ರೂಪಿಸಿ 'ಕಲಾಮಾಧ್ಯಮ' ಎಂಬ ಯೂಟ್ಯೂಬ್ ಚಾನಲ್ ಮೂಲಕ ಬಿತ್ತರಿಸುತ್ತಿರುವ ಕೆ.ಎಸ್. ಪರಮೇಶ್ವರ್ ಅವರು ಮೂಲತಃ ರಂಗಭೂಮಿ ಕಲಾವಿದ, ಸಾಹಿತ್ಯದ ವಿದ್ಯಾರ್ಥಿ. ಎರಡು ಸಿನಿಮಾಗಳಲ್ಲಿ ಸಹ ನಿರ್ದೇಶಕನಾಗಿ ಕಾರ್ಯನಿರ್ವಹಿಸಿದ್ದಾರೆ. ಡಾಕ್ಯುಮೆಂಟರಿಗಳಲ್ಲಿ ಅಪಾರ ಆಸಕ್ತಿ ಹೊಂದಿದ್ದ ಅವರು 2014ರಲ್ಲಿಯೇ 'ಕಲಾ ಮಾಧ್ಯಮ'(https://bit.ly/3tRGcn5) ಯೂಟ್ಯೂಬ್ ಚಾನಲ್ ಆರಂಭಿಸಿದರು.

ತಮ್ಮ ಯೂಟ್ಯೂಬ್ ಚಾನಲ್ ಅನ್ನು ವಿಸ್ತರಿಸಿ ಇದುವರೆಗೂ ಸಾವಿರಾರು ವಿಡಿಯೊಗಳನ್ನು ದಾಖಲಿಸಿದ್ದಾರೆ. 'ಕಲಾಮಾಧ್ಯಮ'ವನ್ನು ಕನ್ನಡದ ನಂ. 1 ಯೂಟ್ಯೂಬ್ ಚಾನಲ್ ಎಂದು ಯೂಟ್ಯೂಬ್‌ನವರೇ ಗುರ್ತಿಸಿದ್ದರು. ಪರಮೇಶ್ವರ್ ಜೊತೆಗಿನ ಮಾತುಕತೆ ಇಲ್ಲಿದೆ...

◆ **ಕಲಾ ಮಾಧ್ಯಮ ಯೂಟ್ಯೂಬ್ ಚಾನಲ್ ರೂಪಿಸುವ ಆಲೋಚನೆ ಹುಟ್ಟಿದ್ದು ಹೇಗೆ?**

ಸಾಹಿತ್ಯ ವಿದ್ಯಾರ್ಥಿಯಾಗಿದ್ದರಿಂದ ಮೊದಲಿನಿಂದಲೂ ಕಿರುಚಿತ್ರಗಳ ಬಗ್ಗೆ ಆಸಕ್ತಿ ಇತ್ತು. ಮೊದಲ ಹೆಜ್ಜೆಯಾಗಿ 2012ರಲ್ಲಿ 'ಮತ್ತೆ ಮತ್ತೆ ತೇಜಸ್ವಿ' ಎಂಬ ಹೆಸರಲ್ಲಿ ಸಾಹಿತಿ ಪೂರ್ಣಚಂದ್ರ ತೇಜಸ್ವಿಯವರ ಕುರಿತ ಒಂದು ಡಾಕ್ಯುಮೆಂಟರಿ ಮಾಡಿದ್ದೆ. ಅದು ತುಂಬಾ ಜನರ ಮೆಚ್ಚುಗೆ ಗಳಿಸಿತು. ಸಾಹಿತಿಗಳಾದ ಜಿ.ಎಸ್. ಶಿವರುದ್ರಪ್ಪ, ಚಂದ್ರಶೇಖರ ಕಂಬಾರರು ಮೆಚ್ಚುಗೆ ವ್ಯಕ್ತಪಡಿಸಿದ್ದರು. ಅದೇ ಅವಧಿಯಲ್ಲಿ ಸುಮಾರು 50 ಜನರನ್ನು ಸಂದರ್ಶನ ಮಾಡಿದೆ. ಇಡೀ ಕರ್ನಾಟಕದಲ್ಲಿದ್ದ ತೇಜಸ್ವಿಯವರ ಒಡನಾಡಿಗಳು, ಸ್ನೇಹಿತರನ್ನು ಸಂದರ್ಶಿಸಿದ್ದೆ. ಆಗ ನನಗೆ ಸಂದರ್ಶನ ಮಾಡುವ, ಸಂಪರ್ಕ ಗಳಿಸುವ, ವಿಷಯ ವಿಶ್ಲೇಷಣೆ ಮಾಡುವ ಹಲವು ಸಂಗತಿಗಳು ಗೊತ್ತಾದವು. ಈ ಅನುಭವದ ಆಧಾರದ ಮೇಲೆ 2014ರಲ್ಲಿ ಯೂಟ್ಯೂಬ್ ಚಾನಲ್ ಆರಂಭಿಸಿದೆ.

ಪ್ರಾರಂಭದಲ್ಲಿ ಅಲ್ಲಿ ನಾನು ಮಾಡಿದ್ದ ಕಿರುಚಿತ್ರಗಳನ್ನಷ್ಟೇ ಅಪ್‌ಲೋಡ್ ಮಾಡುತ್ತಿದ್ದೆ. ಆದರೆ ಕೊರೊನಾ ಲಾಕ್‌ಡೌನ್ ಅವಧಿಯಲ್ಲಿ ಮತ್ತೆ ಯೂಟ್ಯೂಬ್ ಚಾನಲ್ ವಿಸ್ತರಿಸುವ ಆಲೋಚನೆ ಗರಿಗೆದರಿತು.

◆ **ನಿಮ್ಮ ಯೂಟ್ಯೂಬ್ ಚಾನಲ್ ಜನಪ್ರಿಯತೆ ಗಳಿಸಿಕೊಂಡಿದ್ದು ಹೇಗೆ?**

2020ರಲ್ಲಿ ಲಾಕ್‌ಡೌನ್ ಆದಾಗ ಸುಮ್ಮನೆ ಕುಳಿತುಕೊಳ್ಳುವ ಬದಲು ಒಂದಷ್ಟು ಜನರ ಕಥೆ ಕೇಳಬಹುದಲ್ಲ ಅನಿಸಿತು. ನಾನು, ನನ್ನ ಪತ್ನಿ ಸವಿತಾ, ಕ್ಯಾಮೆರಾಮೆನ್ ರವಿರಾಜ್ ಸೇರಿ ಹುಡುಕಾಟ ಆರಂಭಿಸಿದೆವು. ದೊಡ್ಡ ನಟ, ನಟಿಯರ ಕಥೆಯನ್ನು ಸಾಮಾನ್ಯವಾಗಿ ಎಲ್ಲರೂ ಹೇಳಿರುತ್ತಾರೆ. ಆದರೆ ಸಿನಿಮಾದಲ್ಲಿ ಕೆಲಸ ಮಾಡುವ ಸಾಮಾನ್ಯ ಮಂದಿಗೆ ತಮ್ಮ ಕಥೆ ಹೇಳಿಕೊಳ್ಳಲು ವೇದಿಕೆ ಸಿಕ್ಕಿರುವುದಿಲ್ಲ. ಅಂಥವರನ್ನು ಸಂದರ್ಶನ ಮಾಡಲು ಮುಂದಾದೆವು. ಉದಾಹರಣೆಗೆ, ಮೊದಲು ನೇಪಥ್ಯದಲ್ಲಿರುವವರ ಸಂದರ್ಶನ ಮಾಡಬೇಕು ಅನ್ನಿಸಿತು. ಆಗ ಹಲವು ಸಿನಿಮಾಗಳಲ್ಲಿ ಕಾರ್ಯನಿರ್ವಹಿಸಿದ ಲೈಟ್‌ಮ್ಯಾನ್, ಪ್ರಸಾದನ, ವಸ್ತ್ರಾಲಂಕಾರ, ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದ ಜನರೆಡೆ ಗಮನ ನೀಡಿದೆವು. ಅವರಲ್ಲಿಯೂ ಕಥೆಗಳಿರುತ್ತವೆ. ಅವರೂ ಚಿತ್ರರಂಗವನ್ನು ಬಹು ಹತ್ತಿರದಿಂದ ಕಂಡಿರುತ್ತಾರೆ. ಅವರೂ ಸಿನಿಮಾಗಾಗಿ ದುಡಿಯುತ್ತಿರುತ್ತಾರೆ. ಅವರಲ್ಲಿಯೂ ಹೇಳಿಕೊಳ್ಳಲು ನೋವು ನಲಿವು ಇರುತ್ತವೆ. ಆದರೆ ವೇದಿಕೆ ಇರುವುದಿಲ್ಲ. ಪ್ರಯೋಗವೆಂಬಂತೆ ಅಂಥವರ ಸಂದರ್ಶನ ಆರಂಭಿಸಿದೆವು. ಅದು ಉತ್ತಮ ಫಲ ಕೊಟ್ಟಿತ್ತು. ಆಗ ಆ ಪ್ರಯತ್ನ ಹೊಸತಾಗಿತ್ತು. ಅದೇ ಕಾರಣಕ್ಕೆ ಜನಪ್ರಿಯವೂ ಆಯಿತು.

◆ **ಡಿಜಿಟಲ್ ಯುಗದಲ್ಲಿನ ಸ್ಪರ್ಧೆ ನಡುವೆ ಕಲಾಮಾಧ್ಯಮದ ಅನನ್ಯತೆ ಏನು?**

ಸಿನಿಮಾ ಕುರಿತಷ್ಟೇ ಅಲ್ಲ, ರಂಗಭೂಮಿ, ಪತ್ರಕರ್ತರು, ಹಳೆಯ ಸುದ್ದಿ ವಾಚಕರು, ಕ್ರೀಡಾರಂಗದವರು, ಜನಪದ ಕಲಾವಿದರು, ಸಾಮಾಜಿಕ ರಂಗದಲ್ಲಿ ಸಾಧಿಸಿದವರು – ಹೀಗೆ ಭಿನ್ನ ಭಿನ್ನ ಕ್ಷೇತ್ರಗಳಲ್ಲಿ ಗುರುತಿಸಿಕೊಂಡವರನ್ನು ಸಂದರ್ಶನ ಮಾಡಲು ಆರಂಭಿಸಿದೆವು. ಇತಿಹಾಸ ವಿಷಯ ಸಂಬಂಧ ಕೂಡ ವಿಡಿಯೊ ಮಾಡಿದೆವು. ಇಡೀ ಕರ್ನಾಟಕದ ಇತಿಹಾಸವನ್ನು ದಾಖಲಿಸಬೇಕು ಎಂಬ ಕಾರಣಕ್ಕೆ 'ಇತಿಹಾಸ ಸರಣಿ' ಆರಂಭಿಸಿದೆವು. ಕನ್ನಡದ ಕಲೆ, ಸಾಹಿತ್ಯ, ಸಂಸ್ಕೃತಿ ಇತಿಹಾಸವನ್ನು ಒಂದು ಕಡೆ ಸೇರಿಸುವ ಪುಟ್ಟ ಪ್ರಯತ್ನ ಚಾನಲ್‌ಗೆ ಅನನ್ಯತೆ ತಂದುಕೊಟ್ಟಿತು.

◆ **ಯೂಟ್ಯೂಬ್ ಸಂಪಾದನೆ ದಾರಿಯೂ ಆಗಿದೆ. ಈ ಬದಲಾವಣೆಯನ್ನು ನಿಮ್ಮ ಅನುಭವದಲ್ಲಿ ಹೇಗೆ ವಿಶ್ಲೇಷಿಸುತ್ತೀರಿ?**

ಯೂಟ್ಯೂಬ್ ಸಂಪಾದನೆಯ ದಾರಿ ಹೌದು. ಯೂಟ್ಯೂಬ್‌ನಲ್ಲಿ ದುಡಿಯಲು ತುಂಬಾ ಅವಕಾಶ ಇದೆ. ಆದರೆ ನಾನು ಚಾನಲ್ ಆರಂಭಿಸಿದಾಗ ಸಂಪಾದನೆಯ ಉದ್ದೇಶ ಹೊಂದಿರಲಿಲ್ಲ. ತಂತಾನೇ ಸಂಪಾದನೆ ಶುರುವಾಯಿತು. ಸಂಪಾದನೆ ಮಾಡುವ ಒಂದೇ ಉದ್ದೇಶದಿಂದ ಚಾನಲ್ ಆರಂಭಿಸಿದರೆ ಅದು ದೀರ್ಘಕಾಲ ಫಲ ಕೊಡುವುದಿಲ್ಲ. ಭಿನ್ನವಾಗಿ ಚಾನಲ್ ಮಾಡುತ್ತೇನೆ ಎಂದು ಬಂದವರಿಗೆ, ತಾಳ್ಮೆ ಇದ್ದವರಿಗೆ ಸಂಪಾದನೆಗೆ ಮೋಸವಾಗಿಲ್ಲ.

ಚಾನಲ್ ಆರಂಭಿಸುವವರು ಒಂದು ಅಂಶ ಗಮನಿಸಲೇಬೇಕು. ಯೂಟ್ಯೂಬ್ ಚಾನಲ್‌ಗಳಲ್ಲಿ

**ಸಂಪಾದನೆ ಮಾಡುವ ಒಂದೇ ಉದ್ದೇಶದಿಂದ ಚಾನಲ್ ಆರಂಭಿಸಿದರೆ ಅದು ದೀರ್ಘಕಾಲ ಫಲ ಕೊಡುವುದಿಲ್ಲ. ಭಿನ್ನವಾಗಿ ಚಾನಲ್ ಮಾಡುತ್ತೇನೆ ಎಂದು ಬಂದವರಿಗೆ, ತಾಳ್ಮೆ ಇದ್ದವರಿಗೆ ಸಂಪಾದನೆಗೆ ಮೋಸವಾಗಿಲ್ಲ.**